1887ನೇ ಇಸವಿ ಮಿಸಲೇನಿಯಸ್ ನಂಬರ್ 138.

ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಶಾಮಯ್ಯ ಮೈನರ್‌ಗಾರ್ಡಿಯ್ ತಾಯಿ ಸಾವಿತ್ರಮ್ಮ, ಮೃತಪಟ್ಟ ಸದರೀ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಅರಕಲ್‌ಗೂಡು ತಾಲ್ಲೂಕು ಕೃಷ್ಣರಾಜಕಟ್ಟೆ ಹೋಬಳಿ ರುದ್ರಪಟ್ಟಣದ ಸ್ಥಳದ ಸದರೀ ಮೈನರ್‌ಗಾರ್ಡಿಯ್ ತಾಯಿ ಸಾವಿತ್ರಮ್ಮನು ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮ್ಯಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಸಾವಿತ್ರಮ್ಮನವರ ಅರ್ಜಿಯನ್ನು 1887ನೇ ಇಸವಿ ಏಪ್ರೆಲ್ ತಿಂಗಳು ತಾರೀಖು 5ರಲ್ಲು ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಮಣಯ್ಯ ವುರಫ್ ತಮ್ಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1887ನೇ ಇಸವಿ ಮಾರ್ಚ್ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 27ನೇ ಫಿಬ್ರವರೀ 1887.

ಹಾಸನದ ಡಿಸ್ಟ್ರಿಕ್ಟಿನಲ್ಲಿ ಗವರ್ಮೆಂಟ್ ಫಾರೆಸ್ಟುಗಳಿಂದಲೂ ಹಿಡುವಳೀ ಜಮೀರ್ಗಳಿಂದಲೂ, 1887—88ನೇ ಮುಂದಿನ ಸಾಲ್ಕಾರ್ ಸಾಲಿನಲ್ಲಿ ಇದರಡೀಕಂಡ ತೇದಾದುವುಳ್ಳ ವಣಗಿದ ಗಂಧದಮರಗಳು ಮತ್ತು ಹಳೆ ಗಂಧದ ಮರದ ಬೇರುಗಳನ್ನು ಕ್ರಮವಾಗಿ ಚೆಕ್ಕಿ ತಯಾರ್ಮಾಡಿ ಅಂದರೆ ಮೇಲ್‌ಗಡೆ ಸ್ವಲ್ಪ ಬಿಳಿಮರ ಸಹಿತವಾಗಿ ಕಂಟ್ರಾಕ್ಟು ಮೂಲಕ ಜಮಾಯಿಸಿ ಹಾಸನದ ಸಂದಲ್ ಕೋಠಿಯಲ್ಲಿ ಒಪ್ಪಿಸುವ ಬಗ್ಯೆ ಇದರ ದೆಶೆಯಿಂದ ದರಖಾಸ್ತುಗಳು ಅಪೇಕ್ಷಿಸಲ್ಪಡುತ್ತವೆ.

		ಟ್ಟ್ಗಳು.
1.	ಹಾಸನ ತಾಲ್ಲೂಕು ಗ್ರಾಮದ ಸಬ್ ತಾಲ್ಲೂಕು ದೇವೀಲ್	40
2.	ಅರಸೀಕೆರೆ ತಾಲ್ಲೂಕು	30
3.	ಚನ್ನರಾಯಪಟ್ಟಣ ತಾಲ್ಲೂಕು	10
4.	ಹೊಳೇನರಸೀಪುರ ಡಿಟೋ	10
5.	ಅರಕಲ್‌ಗೂಡು ಡಿಟೋ	40
6.	ಮಂಜರಾಬಾದ್ ಡಿಟೋ	60
7.	ಬೇಲೂರು ಡಿಟೋ	60
	ಜುಮ್ಲಾ	250

2. ದರಖಾಸ್ತುಗಳು "ಹಾಸನದ ಕೋಠೀಗೆ ವಣಗಿದ ಗಂಧದ ಮರಗಳನ್ನೂ ಹಳೇ ಗಂಧದಮರದ ಬೇರುಗಳನ್ನೂ ಸರಬರಾಯಿ ಮಾಡುವ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

3. ಸರಬರಾಯಿ ಮಾಡುವ ಬಗ್ಯೆ ವಪ್ಪಿಕೊಳ್ಳುವ ತೇದಾದಿನ ಮೇಲೆ ದರ ಟ್ಟ್ ವಂದಕ್ಕೆ ನಾಲ್ಕು ರೂಪಾಯಿ ಮೇರೆ ಆಗುವ ಮೊಬಲಗನ್ನ ನಗದಾಗಿಯಾಗಲೀ ಕರ್ಚೆಸಿ ನೋಟಿನ ಮೂಲಕವಾಗಿಯಾಗಲೀ ದರಖಾಸ್ತಿನೊಡನೆ ಕಳುಹಿಲ್ಪಟ್ಟ ಹೊರ್ತು ಅನ್ಯಥಾ ಯಾವ ದರಖಾಸ್ತೂ ಅಂಗೀಕರಿಸಲ್ಪಡಲಾರದು.

4. ಪ್ರತಿದರಖಾಸ್ತಿನಲ್ಲಿಯೂ, ದರಖಾಸ್ತುದಾರನು ವಣಗಿದ ಮರಗಳಿಗೂ ಮತ್ತು ಹಳೇ ಬೇರುಗಳಿಗೂ ಅವುಗಳು ತಯಾರ್ಮಾಡಿ ವಿಂಗಡಿಸಲ್ಪಟ್ಟ ತರುವಾಯ ಕೋಠೀಯಲ್ಲಿ ತೂಕಮಾಡಲ್ಪಟ್ಟು ದಾಸ್ತ್ ಮಾಡಲ್ಪಟ್ಟ ತೇದಾದಿಗೆ ದರ ಟ್ಟ್ ವಂದಕ್ಕೆ ಖಾಯಿಷ್ ಮಾಡುವ ಬೇರೆಬೇರೆ ಕಮ್ಮಿದರವನ್ನು ನಮೂದಿಸತಕ್ಕದ್ದು.

5. ಡಿಪ್ಯೂಟಿ ಕಮ್ಮಿಷನರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ; ಮತ್ತು ಹಾಂಗೆ ತಿರಸ್ಕರಿಸುವ ಬಗ್ಗೆ ಅವರು ಯಾವ ಕಾರಣವೂ ತಿಳಿಸಬೇಕಾಗಿಲ್ಲವು.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಅಂಗೀಕರಿಸಲ್ಪಟ್ಟ ತಾರೀಖು ಲಾಗಾಯತು ಎಂದುಮಾರದವಳಗಾಗಿ ತಕ್ಕ ಫಾರಾಕಾಗದದಲ್ಲಿ ಕಂಟ್ರಾಕ್ಟು ಮುಚ್ಚಲಿಕೆಯನ್ನು ಬರೆದು ಕೊಡದಿದ್ದರೆ ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲ್ಪಡುವದು.

7. ಅಂಗೀಕರಿಸಲ್ಪಡದ ದರಖಾಸ್ತುದಾರರ ಡಿಪಾಜಿಟ್ ಮೊಬಲಗು ಕ್ರಮವಾಗಿ ಅವರಿಗೆ ವಾಪಸ್ ಮಾಡಲ್ಪಡುವದು.

8. ಬಂದ್ ಮಾಡಲ್ಪಟ್ಟ ದರಖಾಸ್ತುಗಳು ಇದರಡೀ ರುಜು ಮಾಡಿರುವವರಿಂದ 1887ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ತೆಗದುಕೊಳ್ಳಲ್ಪಡುವದು.

9. ದರಖಾಸ್ತುದಾರರು, ಬಂದು ಯಾ ಹೆಚ್ಚು ತಾಲ್ಲೂಕುಗಳಿಗೋಸ್ಕರವಾಗಲೀ ಪಟ್ಟು ಡಿಸ್ಟ್ರಿಕ್ಟು ಗೋಸ್ಕರವಾಗಲೀ ದರಖಾಸ್ತು ಮಾಡುವದಕ್ಕೆ ಸ್ವತಂತ್ರರಾಗಿರುತ್ತಾರೆ.

10. ಕಂಟ್ರಾಕ್ಟಿನ ಷರತ್ತುಗಳು ಕುರಿತ ಯಾ ಇತರ ವಿಷಯಿಕವಾದ ವಿಶೇಷ ತಪಶೀಲುಗಳು ಹಾಸನದ ಡಿಸ್ಟ್ರಿಕ್ಟು ಫಾರೆಸ್ಟು ಪ್ರೊಬೇಷನರವರಿಂದ ತಿಳಿದುಕೊಳ್ಳಬಹುದು.

ಹೆಚ್. ಮುದ್ದಪ್ಪ,
ಫಾರೆಸ್ಟ್ ಪ್ರೊಬೇಷನರ್, ಹಾಸನ ರೇಂಜ್.

ಸ್ಯ 1887ನೇ ಇಸವಿ ಫಿಬ್ರವರೀ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.

ಬೆಳೆಗಳ ಸ್ಥಿತಿ.—ಫಸಲಲ್ಲಿರುವ ಗನ್ನಾ ಮತ್ತು ನೆಲ್ಲಿನ ಬೆಳೆಗಳು ಬಳ್ಳೀ ಸ್ಥಿತಿಯಲ್ಲಿದ್ದವು. ಗನ್ನಾ ಮತ್ತು ವೈಶಾಖೀ ನೆಲ್ಲು ಬಿತ್ತಲ್ಪಟ್ಟವು; ಕಾರ್ತೀಕಿ ನೆಲ್ಲು, ಗನ್ನಾ ಮತ್ತು ಡಿಸ್ಟ್ರಿಕ್ಟಿನ ಕೆಲವು ಪ್ರದೇಶಗಳಲ್ಲಿ ರಾಗಿ, ಅವರೆ ಮತ್ತು ತೊಗರಿ ಕಟಾವಾದವು.

ಜನಾರೋಗ್ಯ.—ಸರ್ವತ್ರ ಚಕ್ಕನ್ನಾಗಿತ್ತು, ಜ್ವರ, ಆಮಶಂಬೆ ಕ್ಲೋಸ್‌ಪೇಟೆ, ಕ್ಯಾಕಾನಹಳ್ಳಿ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ವ್ಯಾಪಿಸಿದ್ದವು ಮತ್ತು ಕಿಡಬು ನೆಲಮಂಗಲ ತಾಲ್ಲೂಕಿನಲ್ಲಿ ಕೆಲವು ಮಟ್ಟಿಗೆ ವ್ಯಾಪಿಸಿದ್ದು.

ಜನಮರಣ.—ಜನವರೀ ತಿಂಗಳಲ್ಲಿ (ಲಕ್ಕ ಭಾರದ ದೊಡ್ಡಬಳ್ಳಾಪುರ ತಾಲ್ಲೂಕು ವಿನಾ) 741 ಮಂದಿಯೂ ಆ ಹಿಂದಿನ ತಿಂಗಳಲ್ಲಿ 907 ಮಂದಿಯೂ ಮೃತಪಟ್ಟರುತ್ತಾರೆ.

ಕಾಳ್ನಡೆ.—ಈ ತಿಂಗಳಲ್ಲಿ 1,787 ಕಾಳ್ನಡೆಯೂ ಆ ಹಿಂದಿನ ತಿಂಗಳಲ್ಲಿ 656 ಕಾಳ್ನಡೆಯೂ ಮೃತಪಟ್ಟಿರುತ್ತವೆ, ಈ ಪೈಕೀ 104 ಕಾಡುಮೃಗಗಳಿಂದ ಕೊಲ್ಲಲ್ಪಟ್ಟವು.

ಜಮ್ಮಾ.—ಸಾಗುವಳೀ ಬಗ್ಗಾಗಿ 148—2—6 ರೂಪಾಯಿಗಳು ಕಂದಾಯವುಳ್ಳ ಜಮ್ಮಾಗಳು ತೆಗದುಕೊಳ್ಳಲ್ಪಟ್ಟವು.

ಎ. ಹೆಚ್. ಮಕ್ಕೆಂಟೈರ್,
ಡಿಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ಮಳೆ.—ಈ ತಿಂಗಳೊಳಗೆ ಮಳೆ ಬೀಳಲಿಲ್ಲ.

ಬೀಜವೇರಾವಾದ್ದು.—ಕೊಪ್ಪ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಕಾರ್ನೆಲ್ಲು ವೇರಾವಾಯಿತು.

ಫಸಲ್ ಕಟಾವಾದ್ದು.—ತರೀಕೆರೆ ತಾಲ್ಲೂಕಿನಲ್ಲಿ ಅವರೆ, ಹುರಳಿ, ಜೊಳ ಕಟಾವಾದವು, ಕೊಪ್ಪ ಮತ್ತು ಮೂಡಗೆರೆ ತಾಲ್ಲೂಕಿನಲ್ಲಿ ಅಡಿಕೆ ಕಟಾವಾಯಿತು, ಕೊಪ್ಪ ತಾಲ್ಲೂಕಿನಲ್ಲಿ ಮೆಣಸು ಕಟಾವಾಯಿತು. ಚಿಕ್ಕಮಗಳೂರು ಮತ್ತು ಕಡೂರು ತಾಲ್ಲೂಕಿನಲ್ಲಿ ಕಡ್ಲೆ, ಗೋಧಿ ಕಟಾವಾದವು, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗನ್ನಾ ಮತ್ತು ಮೆಂತ್ಯೆ ಕಟಾವಾದವು.